ಬೇಕಾದ ಹಣ ಬಾಕಿಯೇ ಇದೆಯಲ್ಲಾ? ಕೇಳು, ಕೇಳು'' ಎಂದು ಅವನ ಹಿಂದೆಯೇ ಹೋದರು. ಆದರೆ ಸರ್ದಾರ ಅವರ ಮಾತನ್ನು ಕೇಳಿಸಿಕೊಳ್ಳದೆ ಹೊರಟೇಹೋದ.

ಇನ್ನೊಂದು ದಿನ ಸರ್ದಾರ ದಕ್ಷಿಣೇಶ್ವರಕ್ಕೆ ಬಂದ. ಆಗ ಶ್ರೀರಾಮಕೃಷ್ಣರು ದಿವ್ಯವಾದ ಹಾಡನ್ನು ಹಾಡುತ್ತ ಉನ್ಮತ್ತರಾಗಿದ್ದರು. ಸರ್ದಾರನು ತನಗೆ ಸಲ್ಲಬೇಕಾದ ಹಣವನ್ನು ಪಡೆಯಲು ಬಂದವನು, ಅವರ ಹಾಡನ್ನು ಕೇಳಿ ಅತ್ಯಂತ ಮೋಹಿತನಾದ. ಅವನು ಕಾಳೀದೇವಸ್ಥಾನದ ಮೆಟ್ಟಿಲ ಬಳಿಯೇ ಕುಳಿತುಕೊಂಡ. ಎಲ್ಲರೂ ಹೊರಟುಹೋದ ಬಳಿಕ ಶ್ರೀರಾಮಕೃಷ್ಣರು ಆತನನ್ನು ಕಂಡರು. ಈ ಬಾರಿಯೂ ಶ್ರೀರಾಮಕೃಷ್ಣರು ಆತನಿಗೆ ಹಣ್ಣು , ಸಿಹಿತಿಂಡಿ ಮುಂತಾದ ಪ್ರಸಾದವನ್ನೆಲ್ಲ ನೀಡಿದರು. ಆ ದಿನವೂ ಆತ ಏನೂ ಮಾತನಾಡದೆ ಹೊರಟುಹೋದ.

ಇನ್ನೊಂದು ದಿನ ಡಕಾಯಿತ ಸರ್ದಾರನು ಇಬ್ಬರು ಸ್ನೇಹಿತರೊಡನೆ ದಕ್ಷಿಣೇಶ್ವರ ದೇವಾಲಯದ ಬಳಿ ಪ್ರತ್ಯಕ್ಷನಾದ. ಆ ದಿನ ಆತ ಸ್ವಾಭಾವಿಕ ವೇಷದಲ್ಲೇ ಬಂದಿದ್ದ. ಮಂದಿರ ದರ್ಶನ ಮಾಡಿ ಅವರು ಶ್ರೀರಾಮಕೃಷ್ಣರ ಕೋಣೆಯ ಬಳಿ ಸುತ್ತಾಡತೊಡಗಿದರು. ಆಗ ಶ್ರೀರಾಮಕೃಷ್ಣರು ಕೋಣೆಯಲ್ಲಿ ಇರಲಿಲ್ಲ, ಅನಂತರ ಪಂಚವಟಿಯ ಕಡೆಯಿಂದ ಕೋಣೆಗೆ ಬಂದರು. ಅವರನ್ನು ಕಂಡು ಶ್ರೀರಾಮಕೃಷ್ಣರು, ''ಯಾವಾಗ ಬಂದಿರಪ್ಪಾ?'' ಎಂದು ಕೇಳಿದರು. ಆಗ ಅವರು ಅಸಾಧಾರಣವಾಗಿ ನಡೆದುಕೊಂಡರು. ಮೂವರೂ ಶ್ರೀರಾಮಕೃಷ್ಣರ ಚರಣಕಮಲಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಅದನು ಕಂಡು ಶ್ರೀರಾಮಕೃಷ್ಣರು ನೃತ್ಯ ಮಾಡಲಾರಂಭಿಸಿದರು. ಅವರು ಹೇಳತೊಡಗಿದರು, ''ತಾಯಿ, ಅದ್ಭುತ ಲೀಲೆ ಮಾಡಿದೆ, ಎಂಥ ಚಮತ್ಕಾರ! ಏಳಿರಪ್ಪಾ ಏಳಿ'' ಎಂದರು. ಅವರು ಎದ್ದು ನಿಂತರು. ಎರಡೂ ಕೈಗಳನ್ನು ಜೋಡಿಸಿ ಕಂಬನಿಗರೆಯುತ್ತಾ ''ಅಪ್ಪಾ, ನಮಗೇನಾಗುವುದು? ನಾವೋ, ಪಾಪಿಗಳು, ಖೂನಿಗಳು, ಡಕಾಯಿತರು'' ಎಂದು ಅಳಲಾರಂಭಿಸಿದರು.

ಶ್ರೀರಾಮಕೃಷ್ಣರು ಅವರನ್ನು ಸಮಾಧಾನಗೊಳಿಸುತ್ತಾ ''ಅಪ್ಪಾ! ನಾಳೆ ರಾಮನವಮಿ, ಇಲ್ಲಿಗೆ ನಾಳೆ ಅನೇಕರು ಬರುತ್ತಾರೆ, ದೇವಿಯ ಪ್ರಸಾದ ಪಡೆಯುತ್ತಾರೆ. ನೀವೂ ಬನ್ನಿ, ಪ್ರಸಾದ ಪಡೆಯಿರಿ. ಖಂಡಿತ ಬರಬೇಕು, ತಿಳಿಯಿತೆ? ನೋಡಿ, ತಾಯಿ ನಿಮಗೆ ಕೈಕಾಲುಗಳನ್ನು ಕೊಟ್ಟಿದ್ದಾಳೆ. ದುಡಿದು ತಿನ್ನಿರಿ. ಈ ರೀತಿ ಕಳ್ಳತನ, ಸುಳ್ಳುಗಳಿಂದ ಏನಾಗುವುದು? ತಾಯಿಯನ್ನು ಪ್ರಾರ್ಥಿಸಿರಿ. ಆಕೆ ಎಲ್ಲದಕ್ಕೂ ಸರಿಯಾದ ವ್ಯವಸ್ಥೆ ಮಾಡಿಕೊಡುತ್ತಾಳೆ'' ಎಂದರು.

ಭಗವಾನ್ ಶ್ರೀರಾಮಕೃಷ್ಣರು ಯಾವ ರೀತಿ ಅವರಿಗೆ ಈ ಆಶೀರ್ವಾದವನ್ನು ಇತ್ತರೋ ಯಾರು ಬಲ್ಲರು? ಡಕಾಯಿತರ ಅಂತಃಕರಣದಲ್ಲಿ ಯಾವ ಭಾವ ಸಂಚಾರವಾಯಿತೋ ಅದನ್ನೂ ನಾವು ಅರಿಯೆವು. ಆದರೆ ಏನಾಗಬೇಕಾಯಿತೋ ಅದಾಯಿತು. ಆ ಡಕಾಯಿತರು ಶ್ರೀರಾಮಕೃಷ್ಣರ ಆಶೀರ್ವಚನವನ್ನು ಆಲಿಸಿ, ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಹೊರಟುಹೋದರು. ಚಿನ್ನ, ಹಣ ಮುಂತಾದವುಗಳ ಬಗ್ಗೆ ಅವರು ಮರೆತೂ ಪ್ರಶ್ನೆ ಮಾಡಲಿಲ್ಲ. ಇದನ್ನೆಲ್ಲಾ ಸ್ವಯಂ ಶ್ರೀರಾಮಕೃಷ್ಣರ ಬಾಯಿಯಿಂದಲೇ ನಮ್ಮ ತಂದೆಯವರು ಆಲಿಸಿದರು. ಇದನ್ನೆಲ್ಲಾ ಹೇಳಿದ ಬಳಿಕ ಶ್ರೀರಾಮಕೃಷ್ಣರು ಹೇಳಿದರಂತೆ, ''ತಾಯಿ ಎಂತಹ ಲೀಲಾಮಯಿ! ಆಕೆಯದು ಅನಂತ ಲೀಲೆ. ನೋಡಿದೆಯಾ ಡಕಾಯಿತರು ಎಷ್ಟೊಂದು ರೀತಿಯಲ್ಲಿ ಸುಧಾರಣೆಗೊಂಡರೆಂದು?''

ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿ ಹೋದ ಡಕಾಯಿತರು ಸುಮಾರು ಆರು ತಿಂಗಳ ಕಾಲ ಕಾಳೀದೇವಸ್ಥಾನಕ್ಕೆ ಬರಲಿಲ್ಲ. ಆರು ಏಳು ತಿಂಗಳ ಬಳಿಕ ಅವರಲ್ಲಿ ಒಬ್ಬ ಅಲ್ಲಿಗೆ ಬಂದ.

ಶ್ರೀರಾಮಕೃಷ್ಣರು ಕೇಳಿದರು ''ಏನಪ್ಪಾ, ಇಷ್ಟೊಂದು ದಿನಗಳ ಬಳಿಕ ಬಂದಿರಿ?''

ಆ ಡಕಾಯಿತ ತನ್ನ ಹೆಗಲ ಮೇಲಿದ್ದ ಮೂಟೆಯಿಂದ ಒಂದು ಪೀಠವನ್ನು ಹೊರತೆಗೆದ. (ಅದರ ಮೇಲೆ ಆರಾಮವಾಗಿ ಕುಳಿತುಕೊಳ್ಳಬಹುದಾಗಿತ್ತು. ಅದು ಸ್ವಲ್ಪ ಎತ್ತರವಿತ್ತು) ಅದನ್ನು ಶ್ರೀರಾಮಕೃಷ್ಣರ ಮುಂದಿಟ್ಟು ''ದೇವರೇ! ನೀವು ಚಳಿಗಾಲದಲ್ಲಿ ಇದರ ಮೇಲೆ ಕುಳಿತು ಎಣ್ಣೆ ಹಚ್ಚಿಕೊಳ್ಳಿ. ನಾನು ಒಂದು ಮರಗೆಲಸದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮಗೆ ಉಪಯೋಗಕ್ಕೆ ಬರುವುದೆಂದು ಇದನ್ನು ಸ್ವತಃ ನಾನೇ ತಯಾರಿಸಿದೆ '' ಎಂದ. ಈ ಮಾತುಗಳನ್ನು ಹೇಳುತ್ತಾ ಆತನ ಕಣ್ಣುಗಳಿಂದ ಪ್ರೇಮಾಶ್ರು ಸುರಿಯಲಾರಂಭಿಸಿತು. ಶ್ರೀರಾಮಕೃಷ್ಣರು, ''ಹಾ! ಖಂಡಿತ ಇದರ ಮೇಲೆ ಕುಳಿತುಕೊಳ್ಳುವೆ. ತಾಯಿ ನಿಮಗೆ ಒಳ್ಳೆಯ ಮನಸ್ಸನ್ನು ನೀಡಿದ್ದಾಳೆ. ಇದು ಆ ಸನ್ಮತಿಯ ಫಲ! ಈ ಋಣವನ್ನು ತೀರಿಸಲಾಗುವುದೆ?'' ಎಂದರು.

ಈ ರೀತಿಯಲ್ಲಿ ಒಬ್ಬೊಬ್ಬರಾಗಿ ಕೋಸಾಲಪುರದ ಬಯಲಿನ ಡಕಾಯಿತರೆಲ್ಲಾ ಶ್ರೀರಾಮಕೃಷ್ಣರ ಆಶೀರ್ವಾದದಿಂದ ದರೋಡೆ ಮಾಡುವುದನ್ನು ಬಿಟ್ಟು, ನಾನಾ ಬಗೆಯ ಕೆಲಸಕಾರ್ಯಗಳಲ್ಲಿ ನಿರತರಾದರು. ಅದರಲ್ಲಿ ಒಬ್ಬಾತ ರಾಣಿ ಸುಮತಿಯ ಮನೆ ಕಾಯುವವನಾದ. ಇನ್ನೊಬ್ಬ ಅಲ್ಲೇ ಕುದುರೆಗಳನ್ನು ಸಂರಕ್ಷಿಸುವವನಾದ. ಇನ್ನೊಬ್ಬ ಮರದ ಅಂಗಡಿಯನ್ನು ತೆರೆದ. ಇನ್ನು ಕೆಲವರು ತರಕಾರಿ ಮಾರಿ ಜೀವನಯಾತ್ರೆ ನಡೆಸಿದರು. ಡಕಾಯಿತರ ಮುಖ್ಯಸ್ಥರೆಲ್ಲರೂ ರಾಯ್, ವಂಶಿ, ದಾಸ ಮುಂತಾದ ಅನೇಕ ಹೆಸರುಗಳನ್ನು ಹೊಂದಿದ್ದರು. ಅವರ ನೇತಾರನೊಬ್ಬ ಇಳಿವಯಸ್ಸಿನಲ್ಲೂ ದಕ್ಷಿಣೇಶ್ವರ ಕಾಳೀದೇವಸ್ಥಾನಕ್ಕೆ ಬರುತ್ತಿದ್ದ, ಹಾಗೂ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಕುಳಿತಿರುತ್ತಿದ್ದ. ಎಂತಹ ಅಪೂರ್ವ ಲೀಲೆ ಆ ಲೀಲಾಮಯನದು!

(ಸಂಗ್ರಹ: **ಶ್ರೀ ರಾಮಕೃಷ್ಣ ಓ ದಕ್ಷಿಣೇಶ್ವರೇರ್ ಮಾನುಷ್,**
ಮೂಲ ಬಂಗಾಳಿ: ತಡಿತ್ ಕುಮಾರ್ ಬಂದೋಪಾಧ್ಯಾಯ
ಪ್ರಕಾಶಕರು: ಶ್ರೀ ಶಾರದಾ ಮಠ, ದಕ್ಷಿಣೇಶ್ವರ,
ಕೋಲ್ಕತ್ತಾ ೭೦೦೦೭೬. ದ್ವಿತೀಯ ಮುದ್ರಣ : ೨೦೧೧ ) *

ಸ್ವಾಮಿ ನಿತ್ಯಸ್ಥಾನಂದ

# ಶರಣಾಗತಿ






ಎಲ್ಲ ಧರ್ಮಗಳ ಆತ್ಯಂತಿಕ ಗುರಿ ಅಹಂಕಾರ ಮರ್ದನ. (ಪ್ರಾಪಂಚಿಕ ಗುರಿ ಅಹಂಕಾರ ವರ್ಧನೆ). ಪ್ರತಿಯೊಬ್ಬರಲ್ಲಿಯೂ ವೈಯಕ್ತಿಕತೆ ಇರುತ್ತದೆ, ವ್ಯಕ್ತಿಭಾವ ಇರುತ್ತದೆ, ಅಥವಾ 'ನಾನು' ಎಂಬ ಅಹಂಭಾವವಿರುತ್ತದೆ. ಈ ಭಾವಕ್ಕೆ ಮುಖ್ಯ ಕಾರಣ ಚೈತನ್ಯವು ವ್ಯಕ್ತಿಗತವಾದ ದೇಹೇಂದ್ರಿಯ ಮನಸ್ಸುಗಳೊಡನೆ ಒಂದಾಗಿಸಿಕೊಳ್ಳುವುದು. ಚೈತನ್ಯಕ್ಕೆ ನಿಜವಾಗಿಯೂ ವೈಯಕ್ತಿಕತೆ ಇಲ್ಲ, ಅದು ಆಕಾಶದಂತೆ ಸರ್ವವ್ಯಾಪಿಯಾದುದು. ಒಂದು ಖಾಲಿ ಮಡಕೆ ಇದ್ದರೆ ಆಕಾಶವು ಮಡಕೆಯಿಂದ ಸೀಮಿತವಾದಂತೆ ಕಂಡು ಬರುತ್ತದೆ. ಅದನ್ನು ಘಟಾಕಾಶ ಎಂದು ಕರೆಯುತ್ತೇವೆ. ಆದರೆ ಆಕಾಶಕ್ಕೆ ನಿಜವಾಗಿಯೂ ಸೀಮಿತತೆ ಇಲ್ಲ – ಮಡಕೆಯ ಒಳಗೂ ಹೊರಗೂ ಮತ್ತು ಮಡಕೆಯ ಮಣ್ಣಿನಲ್ಲಿಯೂ ಆಕಾಶವಿದೆ. ಆದ್ದರಿಂದ ಆಕಾಶ ನಿಜವಾಗಿಯೂ ಸೀಮಿತವಾಗಿಲ್ಲ – ಘಟಾವಚ್ಛಿನ್ನ ಆಕಾಶವೆಂಬುದು ಇಲ್ಲ. ಘಟವು ಸರ್ವವ್ಯಾಪಿ ಆಕಾಶಕ್ಕೆ ಒಂದು ವೈಯಕ್ತಿಕತೆಯನ್ನು ಕಲ್ಪಿಸುತ್ತದೆ. ಘಟವು ಒಡೆದು ಹೋದರೆ ಈ ವೈಯಕ್ತಿಕತೆಯು ಹೊರಟುಹೋಗುತ್ತದೆ. ಹಾಗೆಯೇ ಚೈತನ್ಯವೂ ಸರ್ವವ್ಯಾಪಿಯಾದುದು. ದೇಹೇಂದ್ರಿಯ ಮನಸ್ಸುಗಳಿಂದ ಸೀಮಿತಗೊಂಡಾಗ ಅದನ್ನು ಜೀವಾತ್ಮ ಎಂದು ಕರೆಯುತ್ತೇವೆ. ಇದೇ ನಮ್ಮಲ್ಲಿರುವ ವೈಯಕ್ತಿಕತೆ ಅಥವಾ ಅಹಂಭಾವ. ಈ ಸೀಮಿತತೆಯನ್ನು ಕಳೆದುಕೊಂಡು ಜೀವಾತ್ಮವು ಪರಮಾತ್ಮನೊಡನೆ – ಘಟಾಕಾಶವು ಮಹಾಕಾಶದೊಡನೆ ಒಂದಾಗುವಂತೆ – ಒಂದಾಗುವುದೇ ಧರ್ಮದ ಗುರಿ. ಆಕಾಶವು ಜಡವಾದುದರಿಂದ ಘಟಾಕಾಶವು 'ನಾನು ಘಟ' ಎಂದು ಭಾವಿಸುವುದಿಲ್ಲ – ಅದರಲ್ಲಿ ನಾನೆಂಬುದಿಲ್ಲ. ಆದರೆ ದೇಹೇಂದ್ರಿಯ ಮನಸ್ಸುಗಳಿಂದ ಸೀಮಿತಗೊಂಡ ಚೈತನ್ಯವು 'ನಾನು ಮನುಷ್ಯ', 'ನಾನು ಅಂಥವನು, ಇಂಥವನು' ಎಂದು ಭಾವಿಸುತ್ತದೆ. ಇದನ್ನೇ **ಅವಿದ್ಯೆ** ಎಂದು ಕರೆಯುವುದು.

ಈ ಅಹಂಭಾವವನ್ನು ಹೋಗಲಾಡಿಸುವ ಅನೇಕ ಮಾರ್ಗಗಳಿವೆ. ಅಲ್ಪ ಅಹಂ ಅನ್ನು ವಿಸ್ತಾರಗೊಳಿಸುತ್ತ ಪೂರ್ಣತೆಯನ್ನು ಪಡೆಯುವುದು ಜ್ಞಾನಮಾರ್ಗ. ಕರ್ಮಯೋಗದಲ್ಲಿ ಅನಾಸಕ್ತಿಯ ಮೂಲಕ ಈ ಅಹಂಭಾವವು ಹೊರಟುಹೋಗುತ್ತದೆ. ರಾಜಯೋಗದಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿ ಜೀವಾತ್ಮನ ನಿಜಸ್ವರೂಪವನ್ನು ಅರಿಯುವುದರ ಮೂಲಕ ಅಹಂಭಾವವು ಹೊರಟುಹೋಗುತ್ತದೆ. ಭಗವಂತನಲ್ಲಿ 'ನನ್ನನ್ನು' ಕಳೆದುಕೊಳ್ಳುವುದು ಭಕ್ತಿಯೋಗ. ಈ ರೀತಿ ನಾನೆಂಬುದನ್ನು ಕಳೆದುಕೊಳ್ಳುವುದೇ ಶರಣಾಗತಿ. ಭಗವದ್ಗೀತೆಯಲ್ಲಿ ಎಲ್ಲ ಮಾರ್ಗಗಳ ಬಗ್ಗೆ ಹೇಳಿದ್ದರೂ ಶರಣಾಗತಿಯೇ ಅದರ ಮೂಲ ಸ್ವರ ಅಥವಾ ಮೂಲ ಮಂತ್ರ. **ಶಾಧಿ ಮಾಂ ತ್ವಾಂ ಪ್ರಪನ್ನಂ** ಎಂದು ಶರಣಾಗತಿಯ ಭಾವದಲ್ಲಿಯೇ ಗೀತೋಪದೇಶವು ಪ್ರಾರಂಭವಾಗಿ **ಮಾಮೇಕಂ ಶರಣಂ ವ್ರಜ** ಎಂಬ ಚರಮ ಸಂದೇಶದೊಡನೆ ಕೊನೆಗೊಳ್ಳುತ್ತದೆ.

ಭಗವದ್ಗೀತೆಯ ಚರಮ ಸಂದೇಶವು ಈ ಕೆಳಗಿನ ಶ್ಲೋಕಗಳೊಂದಿಗೆ ಪ್ರಾರಂಭವಾಗುತ್ತದೆ:

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ।**
**ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥**

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**

''ಹೇ ಅರ್ಜುನ, ಎಲ್ಲ ಜೀವಿಗಳ ಹೃದಯದಲ್ಲಿಯೂ ಈಶ್ವರನು ನೆಲೆಸಿರುವನು. ಅವನೇ ಮಾಯೆಯ ಮೂಲಕ ಎಲ್ಲಾ ಜೀವಿಗಳನ್ನೂ ಯಂತ್ರವನ್ನು ನಡೆಸುವಂತೆ ನಡೆಸುತ್ತಿರುವನು. ನೀನು ಅವನಲ್ಲಿಯೇ ಶರಣಾಗು. ಅವನ ಅನುಗ್ರಹದ ಮೂಲಕ ಪರಮ ಶಾಂತಿಯನ್ನು ಶಾಶ್ವತ ಸ್ಥಾನವನ್ನು ಪಡೆಯುತ್ತೀಯೆ.''

ಎಲ್ಲಿಯವರೆಗೆ ನಮ್ಮಲ್ಲಿ ಅಹಂಭಾವವಿರುತ್ತದೆಯೋ ಅಲ್ಲಿಯವರೆಗೂ ನಾವೇ ಎಲ್ಲ ಮಾಡುತ್ತಿರುವುದು ಎಂದೆನಿಸುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ, ಒಲೆಯ ಮೇಲೆ ವಿವಿಧ ತರಕಾರಿಯನ್ನು ಬೇಯಿಸುವುದಕ್ಕೆ ಇಟ್ಟಾಗ ಅವು ಕುಣಿದಾಡುತ್ತಿರುತ್ತವೆ. ಅವಕ್ಕೆ ಪ್ರಜ್ಞೆ ಇದ್ದಿದ್ದರೆ ತಮ್ಮ ಶಕ್ತಿಯಿಂದಲೇ ಕುಣಿದಾಡುತ್ತಿರುವುದಾಗಿ ಭಾವಿಸುತ್ತಿದ್ದವು. ಒಲೆಯ ಬೆಂಕಿಯನ್ನು ತೆಗೆದುಬಿಟ್ಟರೆ ಅವುಗಳ



ಚಲನೆ ಸಂಪೂರ್ಣ ನಿಂತುಹೋಗುತ್ತದೆ. ಹಾಗೆಯೇ ನಮ್ಮ ವ್ಯಕ್ತಿತ್ವದಲ್ಲಿ ನಡೆಯುವ ಕ್ರಿಯೆಗಳೂ ಕೂಡ. ಅಹಂಭಾವದಿಂದಾಗಿ ನಾವೇ ಎಲ್ಲ ಮಾಡುತ್ತಿರುವುದಾಗಿ ಭಾವಿಸುತ್ತೇವೆ. ನಮ್ಮ ದೇಹದಲ್ಲಿ ಅಸಂಖ್ಯ ಕ್ರಿಯೆಗಳು ನಡೆಯುತ್ತಿವೆ, ಅಲ್ಲಿ ನಾನು ಇಲ್ಲವೇ ಇಲ್ಲ. ಕೆಲವು ಬಾಹ್ಯ ಕ್ರಿಯೆಗಳಾದ ಮಾತನಾಡುವುದು, ಕೈಕಾಲು ಅಲ್ಲಾಡಿಸುವುದು ಮುಂತಾದವುಗಳ ವಿಷಯದಲ್ಲಿ 'ನಾನು ಮಾಡುತ್ತಿದ್ದೇನೆ' ಎಂದು ಭಾವಿಸುತ್ತೇವೆ. ಈ ಬಾಹ್ಯಕ್ರಿಯೆಗಳೂ ಕೂಡ, ಆಂತರಿಕ ಕ್ರಿಯೆಗಳಂತೆ, ಮಿದುಳಿನ ನಿಯಂತ್ರಣದಲ್ಲಿವೆ, ಮತ್ತೆ ಮಿದುಳಿನ ಇರುವಿಕೆಯ ಬಗ್ಗೆ ಅದರ ಕೆಲಸದ ಬಗ್ಗೆ ನಮಗೇನೂ ತಿಳಿಯದು – ಇತರರ ಮೂಲಕ ತಿಳಿದುಕೊಳ್ಳಬೇಕಷ್ಟೆ. ನಮಗೆ ಮಿದುಳು ಇದೆಯೇ ಇಲ್ಲವೆ ಎಂದು ಅನುಮಾನಿಸುವುದು ಮಿದುಳಿನ ಮೂಲಕವೇ ಆದುದರಿಂದ ಮಿದುಳು ಇರಲೇಬೇಕೆಂದು ಊಹಿಸಬಹುದು! ದೈಹಿಕ ಮಾನಸಿಕ ಕ್ರಿಯೆಗಳೆಲ್ಲವೂ ಮಿದುಳಿನ ಮೂಲಕವೇ ಆಗುತ್ತಿದ್ದರೂ ಮಿದುಳಿನಲ್ಲಿ 'ನಾನು' ಇಲ್ಲ, ಅದರ ಕ್ರಿಯೆಯನ್ನು 'ನಾನು' ನಿಯಂತ್ರಿಸಲಾರೆ. ಹಾಗಾದರೆ ಈ 'ನಾನು' ಎಲ್ಲಿದೆ, ಇದರ ಸ್ಥಾನವಾವುದು, ಇದು ಎಲ್ಲಿಂದ ಬಂತು? ನಮಗೇನೂ ತಿಳಿಯದು, ಇದೇ ಮಾಯೆ. ಶ್ರೀರಾಮಕೃಷ್ಣರು ಈರುಳ್ಳಿಯ ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು. ಒಬ್ಬನು ಈರುಳ್ಳಿಯೆಂದರೆ ಏನೆಂದು ತಿಳಿಯಲು ಹೊರಟು, ಒಂದೊಂದೇ ಪದರ ಬಿಡಿಸುತ್ತ ಹೋದನು. ಕೊನೆಯಲ್ಲಿ ಏನೂ ಉಳಿಯಲೇ ಇಲ್ಲ. ಇಷ್ಟೊಂದು ಹಾರಾಡುತ್ತಿರುವ ಈ 'ನಾನು' ಎಂಬುದು ಏನು ಎಂದು ವಿಶ್ಲೇಷಿಸುತ್ತ ಹೋದರೆ ಕೊನೆಗೇನೂ ಉಳಿಯುವುದೇ ಇಲ್ಲ. ಈ ಇಲ್ಲದ ವಿಷಯವನ್ನೇ ಆಧರಿಸಿ ಇಡೀ ಪ್ರಪಂಚ ನಡೆಯುತ್ತಿದೆಯಲ್ಲ, ಏನಾಶ್ಚರ್ಯ!

ಶ್ರೀಕೃಷ್ಣನು **ಯಂತ್ರಾರೂಢಾನಿ ಮಾಯಯಾ** ಎಂಬ ಪದಗುಚ್ಛವನ್ನು ಉಪಯೋಗಿಸುತ್ತಾನೆ. ಜೀವಗಳೆಲ್ಲವೂ ಯಂತ್ರದೊಳಗೆ ಸಿಕ್ಕಿಹಾಕಿಕೊಂಡಿವೆ. ಇದೇ ಸಂಸಾರ ಯಂತ್ರ, ಇದರ ಚಕ್ರಗಳು ಕರ್ಮಚಕ್ರ. ಈ ಯಂತ್ರ ಓಡುವುದಕ್ಕೆ ವಿದ್ಯುತ್‌ಶಕ್ತಿ ಯಾವುದೆಂದರೆ **ಮಾಯೆ** ('ಮಾಯಯಾ'). ಇದನ್ನು ನಡೆಸುವವನು ಮಾಯಾಧೀಶನಾದ ಈಶ್ವರ. ಅವನೇ ಎಲ್ಲರಲ್ಲೂ ಎಲ್ಲದರಲ್ಲೂ ಇದ್ದುಕೊಂಡು ಯಾರಿಗೂ ತಿಳಿಯದಂತೆ ಎಲ್ಲವನ್ನೂ ನಡೆಸುತ್ತಿರುವನು. ಇದನ್ನೇ ಉಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ.

**ಯಃ ಆತ್ಮನಿ ತಿಷ್ಠನ್ ಆತ್ಮಾನಂ ಅಂತರೋ ಯಮಯತಿ ।**
**ಯಂ ಆತ್ಮಾ ನ ವೇದ ಯಸ್ಯ ಆತ್ಮಾ ಶರೀರಂ**
**ಏಷ ತೇ ಆತ್ಮಾ ಅಂತರ್ಯಾಮಿ ಅಮೃತಃ ॥**

''ಯಾರು ಜೀವಾತ್ಮನಲ್ಲಿ ಇದ್ದುಕೊಂಡು, ಜೀವಾತ್ಮನನ್ನು ಒಳಗಿನಿಂದ ನಿಯಂತ್ರಿಸುತ್ತಿರುವನೋ, ಯಾರನ್ನು ಈ ಜೀವಾತ್ಮನು ಅರಿಯನೋ, ಈ ಜೀವಾತ್ಮನು ಯಾರ ಶರೀರವೋ ಅವನೇ ನಿನ್ನ ನಿಜವಾದ ಆತ್ಮನು, ಅವನೇ ಅಂತರ್ಯಾಮಿಯು ಮತ್ತು ಅಮೃತನು.''

ಇದನ್ನು ಅರಿತು ಅಹಂಭಾವವನ್ನು ತ್ಯಜಿಸುವುದೇ ಧರ್ಮದ ಆತ್ಯಂತಿಕ ಗುರಿ. ಅಹಂಕಾರವನ್ನು ಬಿಟ್ಟ ಮೇಲೆ 'ನನಗೆ ಮೋಕ್ಷ ಬೇಕು' ಎಂಬ ಬಯಕೆಯೂ ಇರುವುದಿಲ್ಲ. ನಾನು ಎಂಬುದನ್ನು ತ್ಯಜಿಸುವುದೇ ಮುಕ್ತಿ ತಾನೆ! ಶ್ರೀರಮಣ ಮಹರ್ಷಿಗಳ ಹತ್ತಿರ ಒಬ್ಬ ಭಕ್ತನು ಹೋಗಿ ''ನಾನು ಮುಕ್ತಿಯನ್ನು ಬಯಸುತ್ತೇನೆ'' ಎಂದು ಕೇಳಿದನಂತೆ. ಅವರು ಹೇಳಿದರು: ''ನಿನ್ನಲ್ಲಿ 'ನಾನು' ಇದೆ, ಬಯಕೆಯೂ ಇದೆ. ಹಾಗಿರುವಾಗ ಮುಕ್ತಿ ಹೇಗೆ ಲಭಿಸುತ್ತದೆ?'' ಭಕ್ತನು ಮೋಕ್ಷವನ್ನೂ ಬಯಸುವುದಿಲ್ಲ. 'ಎಲ್ಲವೂ ಅವನಿಚ್ಛೆ' ಎಂದು ಭಗವಂತನಲ್ಲಿ ಸಂಪೂರ್ಣ (ಸರ್ವಭಾವೇನ) ಶರಣಾಗುತ್ತಾನೆ. ಶ್ರೀರಾಮಕೃಷ್ಣರು 'ರಾಮನ ಇಚ್ಛೆ' ಎಂಬ ಕಥೆಯನ್ನು ಹೇಳುತ್ತಿದ್ದರು. ಒಬ್ಬ ನೇಯ್ಗೆಯವನಿದ್ದ. ಅವನು ತುಂಬ ರಾಮಭಕ್ತನು, ಪ್ರತಿಯೊಂದು ವಿಷಯದಲ್ಲಿಯೂ 'ರಾಮನ ಇಚ್ಛೆ' ಎಂದು ಹೇಳುತ್ತಿದ್ದನು. ಅವನು ಒಂದು ದಿನ ತಾನು ನೇಯ್ದ ಬಟ್ಟೆಯನ್ನು ಮಾರ್ಕೆಟ್ಟಿನಲ್ಲಿ ಮಾರಾಟಮಾಡಿ ರಾಮನನ್ನು ಸ್ಮರಿಸುತ್ತ ಹಿಂತಿರುಗುತ್ತಿದ್ದನು. ದಾರಿಯಲ್ಲಿ ಕೆಲವು ಕಳ್ಳರು ಸಿಕ್ಕಿದರು. ಅವರು ತಾವು ಕದ್ದ ಮಾಲನ್ನು ಹೊತ್ತುಕೊಂಡು ಬರುತ್ತಿದ್ದರು. ಪಾಪದವನಾದ ಈ ನೇಯ್ಗೆಯವನನ್ನು ತಮ್ಮ ಹೊರೆಯನ್ನು ಅವನ ತಲೆಯ ಮೇಲೆ ಹೊರಸಿದರು. ಈ ಸಮಯಕ್ಕೆ ಪೋಲಿಸರು ಬಂದುಬಿಟ್ಟರು. ಕೂಡಲೆ ಕಳ್ಳರು ಓಡಿಹೋದರು. ಈಗ ನೇಯ್ಗೆಯವನು ಕದ್ದ ಮಾಲಿನೊಂದಿಗೆ ಪೋಲಿಸರಿಗೆ ಸಿಕ್ಕಿಬಿದ್ದನು. ಅವನಿಗೆ ಈಗ ಜೈಲುವಾಸ. ಮುಂದೆ ಅವನನ್ನು ನ್ಯಾಯಾಧೀಶರ ಮುಂದೆ ನಿಲ್ಲಿಸಲಾಯಿತು. ವಿಚಾರಣೆಗೆ ಒಳಪಡಿಸಿದಾಗ ನೇಯ್ಗೆಯವನು ವಿನಂತಿಸಿಕೊಂಡನು: ''ರಾಮನ ಇಚ್ಛೆಯಂತೆ ನಾನೊಬ್ಬ ನೇಯ್ಗೆಯವನು. ರಾಮನ ಇಚ್ಛೆಯಂತೆ ನಾನು ನೇಯ್ದ ಬಟ್ಟೆಯನ್ನು ಮಾರಿ ಮನೆಗೆ ಹಿಂತಿರುಗುತ್ತಿದ್ದೆ. ರಾಮನ ಇಚ್ಛೆಯಂತೆ ಕಳ್ಳರು ಬಂದು ಕದ್ದ ಮಾಲನ್ನು ನನ್ನ ತಲೆಯ ಮೇಲೆ ಹೊರಿಸಿದರು. ರಾಮನ ಇಚ್ಛೆಯಂತೆ ಪೋಲಿಸರು ಬಂದರು, ಮತ್ತು ಕಳ್ಳರು ಓಡಿದರು. ರಾಮನ ಇಚ್ಛೆಯಂತೆ ಪೋಲಿಸರು ನನ್ನನ್ನು ಹಿಡಿದು ಜೈಲಿಗೆ ಹಾಕಿದರು. ಈಗ ರಾಮನ ಇಚ್ಛೆಯಂತೆ ತಮ್ಮ ಮುಂದೆ ನಿಂತಿದ್ದೇನೆ.'' ನ್ಯಾಯಾಧೀಶ ಅವನ ಪ್ರಾಮಾಣಿಕತೆಯನ್ನು ಅರ್ಥಮಾಡಿಕೊಂಡು, ಅವನನ್ನು ಬಿಡುಗಡೆ ಮಾಡಿದನು. ''ರಾಮನ ಇಚ್ಛೆಯಿಂದ ನನಗೆ ಬಿಡುಗಡೆಯಾಯಿತು'' ಎಂದು ಹೇಳಿ ಅವನು ಮನೆಗೆ ಹಿಂತಿರುಗಿದನು.

ಶ್ರೀಕೃಷ್ಣನು ಪೂರ್ಣ ಮನಸ್ಸಿನಿಂದ ಮತ್ತು ಪೂರ್ಣ ಭರವಸೆಯಿಂದ (ಸರ್ವಭಾವೇನ) ತನ್ನಲ್ಲಿ ಶರಣಾಗಬೇಕು ಎಂದು ಹೇಳುತ್ತಾನೆ. ಈ ವಿಷಯವನ್ನು ಅವನು ಮುಂದೆ ೬೫ನೇ ಶ್ಲೋಕದಲ್ಲಿ ವಿವರಿಸುತ್ತಾನೆ.

**ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।**
**ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥**

''ನನ್ನಲ್ಲಿಯೇ ಮನಸ್ಸುಳ್ಳವನಾಗು, ನನ್ನ ಭಕ್ತನಾಗು, ನನ್ನನ್ನೇ ಆರಾಧಿಸುವವನಾಗು ಮತ್ತು ನನ್ನನ್ನೇ ನಮಸ್ಕರಿಸು, ನನ್ನನ್ನೇ ನೀನು ಸೇರುತ್ತೀಯೆ. ಸತ್ಯವಾಗಿ ಪ್ರತಿಜ್ಞೆ ಮಾಡುತ್ತೇನೆ, ಏಕೆಂದರೆ ನೀನು ನನಗೆ ಪ್ರಿಯನಾಗಿರುವೆ.'' **ಮನಸ್** ಎಂದರೆ ಆಲೋಚನಾಶಕ್ತಿ. **ಮನ್ಮನಾ ಭವ** ಎಂದರೆ ನಿನ್ನ ಆಲೋಚನೆಗಳೆಲ್ಲ ಭಗವತ್ ಕೇಂದ್ರಿತ

ವಾಗಿರಲಿ. ಭಕ್ತಿಯು ಭಾವನಾಶಕ್ತಿಗೆ ಸಂಬಂಧಪಟ್ಟಿರುವುದು (emotions). ಆದ್ದರಿಂದ **ಮದ್ಭಕ್ತೋ ಭವ** ಎಂದರೆ ನಿನ್ನ ಎಲ್ಲ ಭಾವವೂ ಭಗವತ್ ಕೇಂದ್ರಿತವಾಗಿರಲಿ. ಭಗವಂತನನ್ನೇ ಪ್ರೀತಿಸು, ಭಗವಂತನನ್ನೇ ಲೋಭಿಸಿ 'ಇನ್ನೂ ಭಗವಲ್ಲಾಭವಾಗಲಿಲ್ಲವಲ್ಲ' ಎಂದು ಚಿಂತಿಸು, ಅವನ ಮೇಲೆ ಕೋಪ ಮಾಡಿಕೊ – ಇತ್ಯಾದಿ. ಯಾಜೀ ಎಂದರೆ ಯಜ್ಞ ಮಾಡುವವನು. ಭಗವದ್ಗೀತೆಯ ಪ್ರಕಾರ ಎಲ್ಲ ಕರ್ಮಗಳೂ ಯಜ್ಞಗಳೇ. ಕರ್ಮಗಳ ಹಿಂದೆ ಇಚ್ಛಾಶಕ್ತಿ ಇರುತ್ತದೆ. **ಮದ್ಯಾಜೀ** ಎಂದರೆ ನಿನ್ನ ಇಚ್ಛಾಶಕ್ತಿಯನ್ನೂ ನನಗೇ ಅರ್ಪಿಸು. ಈ ಮೂರೂ ಮನಸ್ಸಿನ ವಿವಿಧ ಮುಖಗಳು. ಈಗ ಇಡೀ ಮನಸ್ಸನ್ನು ಭಗವಂತನಿಗೆ ಅರ್ಪಿಸಿದಂತಾಯಿತು. **ಮಾಂ ನಮಸ್ಕುರು** ಎಂದರೆ ನಿನ್ನ ಅಹಂಭಾವವನ್ನು ನನಗೇ ಅರ್ಪಿಸು ಎಂದರ್ಥ. ಇನ್ನು ತನ್ನದಾಗಿ ಉಳಿದಿರುವುದು ಏನಿದೆ? ಸರ್ವಭಾವದಿಂದಲೂ ಅವನಲ್ಲೇ ಶರಣಾಗುವುದೆಂದರೆ ಇದೇ.

ಭಕ್ತಿಶಾಸ್ತ್ರದ ಪ್ರಕಾರ ಶರಣಾಗತಿಯ ಆರು ಲಕ್ಷಣಗಳಿವೆ:

**ಆನುಕೂಲ್ಯಸ್ಯ ಸಂಧಾನಂ ಪ್ರಾತಿಕೂಲ್ಯಸ್ಯ ವರ್ಜನಮ್ ।**
**ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವ ವರಣಂ ತಥಾ ।**
**ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ॥**

೧ ಭಗವದಿಚ್ಛೆಗೆ ನಮ್ಮ ಇಚ್ಛೆ ಅಧೀನವಾಗಿರುವುದು.

೨ ಭಗವದಿಚ್ಛೆಗೆ ವಿರುದ್ಧವಾದುದನ್ನು ತ್ಯಜಿಸುವುದು.

೩ ಎಲ್ಲರನ್ನೂ ರಕ್ಷಿಸುತ್ತಾನೆ ಎಂಬ ವಿಶ್ವಾಸ.

೪ ತನ್ನ ಮೇಲೆ ಅವನ ಕೃಪೆ ಇದೆ ಎಂಬ ನಂಬಿಕೆ.

೫ ಸ್ವಪ್ರಯತ್ನದಿಂದ ಏನೂ ಆಗದು ಎಂಬ ದೀನ ಭಾವ (ಕಾರ್ಪಣ್ಯ).

೬ ಅವನಿಗೇ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು.

ಮುಂದಿನ ಶ್ಲೋಕವನ್ನು ಭಗವದ್ಗೀತೆಯ ಚರಮ ಸಂದೇಶವೆಂದು ಕರೆಯಲಾಗಿದೆ.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

''ಸರ್ವಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನನ್ನು ಸರ್ವಪಾಪಗಳಿಂದಲೂ ಬಿಡಿಸುವೆನು; ಶೋಕಿಸಬೇಡ.''

ಗೀತೋಪದೇಶವು ಶರಣಾಗತಿಯಿಂದಲೇ ಪ್ರಾರಂಭವಾಗುತ್ತದೆ. ಅರ್ಜುನನು, '**ಶಾಧಿ ಮಾಂ ಪ್ರಪನ್ನಂ**' (ನಿನ್ನಲ್ಲಿ ಶರಣಾಗಿರುವ ನನಗೆ ಬೋಧಿಸು) ಎಂದು ಶ್ರೀಕೃಷ್ಣನಲ್ಲಿ ಶರಣಾದ ಮೇಲೆಯೇ ಗೀತೋಪದೇಶವು ಪ್ರಾರಂಭವಾಗುತ್ತದೆ, ಮತ್ತು '**ಮಾಮೇಕಂ ಶರಣಂ ವ್ರಜ**' ಎಂಬ ಉಪದೇಶದೊಂದಿಗೆ ಕೊನೆಗೊಳ್ಳುತ್ತದೆ. ವೇದಾಂತಶಾಸ್ತ್ರ ವ್ಯಾಖ್ಯಾನದಲ್ಲಿ ಷಡ್ವಿಧ ಲಿಂಗಗಳು ಬಹಳ ಮುಖ್ಯ. ಅವುಗಳಲ್ಲಿ ಉಪಕ್ರಮ–ಉಪಸಂಹಾರ ಮೊದಲನೆಯದು. ಒಂದು ಗ್ರಂಥ ಅಥವಾ ಲೇಖನವು ಯಾವ ಮುಖ್ಯ ವಿಷಯದೊಡನೆ ಪ್ರಾರಂಭವಾಗುತ್ತದೆಯೋ (ಉಪಕ್ರಮ) ಅದೇ ವಿಷಯದೊಂದಿಗೆ ಕೊನೆಗೊಳ್ಳಬೇಕು (introduction and conclusion). ಮಧ್ಯದಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ವಿವರಣೆ, ಖಂಡನ, ಮಂಡನ ಇತ್ಯಾದಿ ಹಲವಾರು ವಿಚಾರಗಳು ಬರಬಹುದು. ಇಲ್ಲಿಯೂ ಶರಣಾಗತಿಯಿಂದ ಪ್ರಾರಂಭವಾಗಿ ಶರಣಾಗತಿಯೊಂದಿಗೆ ಕೊನೆಗೊಳ್ಳುತ್ತದೆ.

ಕೊನೆಗೆ ಶರಣಾಗತಿಯೊಂದೇ ಗತಿ. ಯಾವುದು ಧರ್ಮ, ಯಾವುದು ಅಧರ್ಮ, ಯಾವುದು ಕರ್ಮ, ಯಾವುದು ಅಕರ್ಮ – ಇವೆಲ್ಲವೂ ಮನುಷ್ಯನ ಬುದ್ಧಿಗೆ ನಿಲುಕದ ವಿಷಯಗಳು. '**ಗಹನಾ ಕರ್ಮಣೋ ಗತಿಃ**' (ಕರ್ಮದ ಗತಿಯು ತುಂಬ ಜಟಿಲವಾದುದು) ಎಂದು ಶ್ರೀಕೃಷ್ಣನು ಹೇಳುತ್ತಾನೆ. 'ಈ ವಿಷಯದಲ್ಲಿ ಜ್ಞಾನಿಗಳೂ ಗೊಂದಲಕ್ಕೊಳಗಾಗುತ್ತಾರೆ.' **(ಕವಯೋಽಪ್ಯತ್ರ ಮೋಹಿತಾಃ)** ಎಂಬುದಾಗಿಯೂ ಅವನು ಹೇಳುತ್ತಾನೆ. ನಮ್ಮ ಅಹಂಕಾರವನ್ನೇ, ನಮ್ಮ ವಿಚಾರವನ್ನೇ ಅವಲಂಬಿಸಿದರೆ, ನಾವು ತಪ್ಪುವುದೇ ಬಹಳ. ನಮ್ಮಲ್ಲಿ ಆಧ್ಯಾತ್ಮಿಕ ಒಳಗಣ್ಣೊಂದಿದೆ. ನಾವು ನಮ್ಮ ಅಹಂಕಾರ ವನ್ನು ಬಿಟ್ಟರೆ ಅದು ತೆರೆಯುತ್ತದೆ. ಆಗ ಎಲ್ಲವೂ ಸ್ಪಷ್ಟವಾಗುತ್ತದೆ. ಈ ಆಂತರಿಕ ಚಕ್ಷುವನ್ನು ಅವನೇ ತೆರೆಯಬೇಕು. 'ನಿನಗೆ ದಿವ್ಯ ಚಕ್ಷುವನ್ನು ನೀಡುತ್ತೇನೆ' **(ದಿವ್ಯಂ ದದಾಮಿ ತೇ ಚಕ್ಷುಃ)** ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಈ ಪ್ರಪಂಚ ಮಾಯಾಮಯ, ಅತ್ಯಂತ ರಹಸ್ಯಾತ್ಮಕವಾದುದು. ಸಾವಿರಾರು ವರ್ಷಗಳಿಂದ ಇದನ್ನು ಇದರ ರಹಸ್ಯವನ್ನು ಭೇದಿಸಲು ತತ್ತ್ವಜ್ಞಾನಿಗಳೂ, ವಿಜ್ಞಾನಿಗಳೂ ಪ್ರಯತ್ನಿಸುತ್ತಲೇ ಇದ್ದಾರೆ. ಪ್ರಯತ್ನಿಸುವವರೆಲ್ಲರೂ ಈ ರಹಸ್ಯದೊಳಗೇ ಬರುವುದರಿಂದ ಈ ರಹಸ್ಯವನ್ನು ಅರಿಯುವುದೆಂತು? ಪ್ರಪಂಚವನ್ನು ಮೀರಿಹೋದರೆ ಪ್ರಪಂಚವೂ ಇರುವುದಿಲ್ಲ , ಅರಿಯುವವನೂ ಇರುವುದಿಲ್ಲ. ಈ ಪ್ರಪಂಚ ಹೇಗುಂಟಾಯಿತೆಂದು ದೇವರಿಗೂ ತಿಳಿದಿರಲಿಕ್ಕಿಲ್ಲ ಎಂದು *ನಾಸದೀಯ ಸೂಕ್ತ* ವೂ ಉತ್ಪ್ರೇಕ್ಷಿಸುತ್ತದೆ. ಆದರೆ ನಮ್ಮ ಬುದ್ಧಿಯು ಸುಮ್ಮನಿರಲಾರದು. ಈ ತಿಳಿಯುವ ಪ್ರಯತ್ನದಲ್ಲಿ ಸೋತ ಮೇಲೆ ಒಂದು ಶರಣಾಗತಿಯ ಭಾವ ಬರುತ್ತದೆ. *'ಪಂಚದಶಿ'* ಯಲ್ಲಿ ಹೇಳಿರುವಂತೆ, 'ಇದೇನಿದು ಎಂದು ನನಗೆ ತಿಳಿಯದಪ್ಪ' ಎಂದು ನೀನು ಶರಣಾಗಲೇಬೇಕು. **(ನ ಜಾನಾಮಿ ಕಿಮಪ್ಯೇತದಿತ್ಯಂತೇ ಶರಣಂ ತವ ॥)**

ಶ್ರೀರಾಮಕೃಷ್ಣರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು. ದೊಡ್ಡ ನದಿಯಲ್ಲಿ ಹೋಗುತ್ತಿದ್ದ ಹಡಗೊಂದರ ಕಂಬದ ಮೇಲೆ ಹಕ್ಕಿಯೊಂದು ಮೈಮರೆತು ಕುಳಿತಿತ್ತು. ಅದು ಎಚ್ಚೆತ್ತಾಗ ನೋಡುತ್ತದೆ, ಹಡಗು ಸಮುದ್ರ ಸೇರಿಬಿಟ್ಟಿದೆ. ಈಗ ಎಲ್ಲಿ ನೋಡಿದರೂ ನೀರೇ ನೀರು, ದಡವೇ ಕಾಣುತ್ತಿಲ್ಲ. ಅದು ಉತ್ತರ ದಿಕ್ಕಿಗೆ ಹಾರುತ್ತದೆ, ದಡ ಸಿಕ್ಕಲಿಲ್ಲ. ಮತ್ತೆ ಬಂದು ಕಂಬದ ಮೇಲೆ ಕುಳಿತುಕೊಳ್ಳುತ್ತದೆ. ಸ್ವಲ್ಪ ಹೊತ್ತಿನ ನಂತರ ದಕ್ಷಿಣ ದಿಕ್ಕಿಗೆ ಹಾರುತ್ತದೆ. ಅಲ್ಲಿಯೂ ದಡ ಸಿಕ್ಕಲಿಲ್ಲ. ಹೀಗೆ ಎಲ್ಲ

ಕಡೆಯೂ ಹಾರಾಡಿದ ಮೇಲೆ, 'ಹಡಗು ಯಾವಾಗ ದಡ ಮುಟ್ಟು ತ್ತದೆಯೋ ಆಗ ದಡ ಸೇರುತ್ತೇನೆ' ಎಂದು ನಿಶ್ಚಯಿಸಿ ಸುಮ್ಮನೆ ಬಂದು ಕಂಬದ ಮೇಲೆ ಕುಳಿತುಕೊಳ್ಳುತ್ತದೆ. ಹೀಗೆ ನಮ್ಮ ವಿಚಾರದ ರೆಕ್ಕೆಯು ಸೋತಾಗ ಶರಣಾಗತಿಯ ಭಾವ ಬರುತ್ತದೆ.

ಭಗವದ್ಗೀತೆಯು ಧರ್ಮ (**ಧರ್ಮಕ್ಷೇತ್ರೇ**) ಎಂಬ ಶಬ್ದ ದೊಂದಿಗೆ ಪ್ರಾರಂಭವಾಗಿ 'ಸರ್ವಧರ್ಮಗಳನ್ನೂ ತ್ಯಜಿಸಿ' ಎಂಬು ದರೊಂದಿಗೆ ಕೊನೆಗೊಳ್ಳುತ್ತದೆ. ಅಂದರೆ ನಮ್ಮ ಜೀವನವು ಧರ್ಮ ದಿಂದ ಪ್ರಾರಂಭವಾಗಬೇಕು ಹಾಗೂ ಕೊನೆಯಲ್ಲಿ ಎಲ್ಲ ಧರ್ಮ ವನ್ನೂ ಮೀರಿಹೋಗಬೇಕು. ನಮ್ಮನ್ನು ನಾವು ನಿಯಂತ್ರಿಸಲು, ನಮ್ಮನ್ನು ನಾವು ಶಿಸ್ತುಗೊಳಿಸಲು ನಾವು ಒಂದು ಧರ್ಮದ ಮಿತಿ ಯೊಳಗೆ ಇರುವುದು ಆವಶ್ಯಕ. ಆದರೆ ಈ ಆವಶ್ಯಕತೆಯನ್ನು ಮೀರಿ ನಾವು ಬೆಳೆಯಬೇಕು. ಸ್ವಾಮಿ ವಿವೇಕಾನಂದರು ಹೇಳು ತ್ತಾರೆ: ''ಒಂದು ಧಾರ್ಮಿಕ ಸಂಪ್ರದಾಯದೊಳಗೆ ಹುಟ್ಟುವುದು ಒಳ್ಳೆಯದು, ಆದರೆ ಅದರೊಳಗೇ ಮಡಿಯಬಾರದು.'' (It is good to be born in a Church, but not to die there.) ಆದ್ದರಿಂದಲೇ ಅವರು ಹೇಳುತ್ತಾರೆ: ''ನಾವು ಮಾನವ ಕೋಟಿಯನ್ನು ವೇದ, ಬೈಬಲ್, ಕುರಾನ್‌ಗಳ ಆಚೆಗೆ ಕರೆದು ಕೊಂಡು ಹೋಗಬೇಕು.'' ನಿಜವಾಗಿಯೂ ಭಗವಂತನನ್ನು ಧ್ಯಾನಿಸುವುದಕ್ಕೆ, ಪ್ರಾರ್ಥಿಸುವುದಕ್ಕೆ, ಅಥವಾ ಆತ್ಮಾನುಸಂಧಾನ ಮಾಡುವುದಕ್ಕೆ ನಮಗೆ ಯಾವ ಧರ್ಮದ ಆವಶ್ಯಕತೆ ಇದೆ? ಅದೊಂದು ನೇರ ಸಂಬಂಧ. ಸಂಸ್ಥಾಬದ್ಧ ಧರ್ಮಗಳನ್ನು ಮೀರಿ ಹೋಗುವುದೇ ನಿಜವಾದ ಧರ್ಮದ ಗುರಿ. ಬಹುಶಃ ಶ್ರೀಕೃಷ್ಣನು ಇದೇ ಭಾವನೆಯನ್ನೇ ಈ ಶ್ಲೋಕದಲ್ಲಿ ವ್ಯಕ್ತಪಡಿಸಿರಬೇಕು.

ಒಂದು ಕಂಬಳಿ ಹುಳವು ತನ್ನ ಸುತ್ತಲೂ ಒಂದು ಗೂಡನ್ನು ಕಟ್ಟಿಕೊಳ್ಳುತ್ತದೆ. ಅದರೊಳಗೇ ಕೆಲವು ಕಾಲ ಇದ್ದು ಬೆಳೆಯುತ್ತ ಹೋಗುತ್ತದೆ. ಒಂದು ದಿನ ಗೂಡನ್ನು ಒಡೆದು, ಹೊರಗೆ ಬಂದು ಬಣ್ಣದ ಚಿಟ್ಟೆಯಾಗಿ, ಮುಕ್ತವಾಗಿ ಹಾರಾಡುತ್ತದೆ. ಅದು ಗೂಡಿ ನಲ್ಲಿಯೇ ಉಳಿದರೆ ಅದರ ಸಾವು ನಿಶ್ಚಯ. ಬೆಳವಣಿಗೆಯ ಸಾಧನವೇ ಮೃತ್ಯುಪಾಶವಾಗುತ್ತದೆ. ಇದೇ ರೀತಿ ಒಂದು ಧರ್ಮದ ಅಥವಾ ಸಂಪ್ರದಾಯದ ಗೂಡಿನೊಳಗೆ ನಾವು ಬೆಳೆಯಬೇಕು. ಆದರೆ ಆ ಸಂಪ್ರದಾಯದೊಳಗೇ ಉಳಿಯಬಾರದು, ಅದನ್ನು ಮೀರಿ ಹೋಗಬೇಕು. ಭಗವಾನ್ ಬುದ್ಧನು ಒಂದು ಕಥೆಯ ಮೂಲಕ ಈ ಮುಖ್ಯಾಂಶವನ್ನು ಚಿತ್ರಿಸಿರುವನು: ಕೆಲವರು ದೋಣಿಯ ಸಹಾಯದಿಂದ ಒಂದು ನದಿಯನ್ನು ದಾಟಿದರು. ಅನಂತರ ಆ ದೋಣಿಯನ್ನು ಹೊತ್ತುಕೊಂಡು ಹೋಗುತ್ತಿದ್ದರು. ಊರಿನ ಜನರು ಕಾರಣವನ್ನು ಕೇಳಿದಾಗ, ''ಈ ದೋಣಿಯಿಂದ ನಮಗೆ ಎಷ್ಟೊಂದು ಸಹಾಯವಾಗಿದೆ ! ಅದನ್ನು ಹಾಗೆಯೇ ಅಲ್ಲಿ ತೊರೆದು ಬಂದುಬಿಡುವುದೇ!'' ಎಂದರು. ಧರ್ಮನೌಕೆಯಿಂದ ಸಂಸಾರನದಿಯನ್ನು ದಾಟಿದಮೇಲೆ, ಅದು ಎಷ್ಟೇ ಚೆನ್ನಾಗಿದ್ದರೂ, ಅನುಕೂಲವಾಗಿದ್ದರೂ, ಅದಕ್ಕೇ ಅಂಟಿಕೊಂಡಿರಬಾರದು. ಅದೂ ಒಂದು ಸಂಸಾರವೇ ಆಗಿಬಿಡುತ್ತದೆ. ಶ್ರೀಕೃಷ್ಣನು ಎರಡನೆಯ ಅಧ್ಯಾಯದ ಒಂದು ಶ್ಲೋಕದಲ್ಲಿ ಇದೇ ಅರ್ಥವನ್ನು ಸೂಚಿಸಿ ದ್ದಾನೆ:

**ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।**
**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥**

'ಎಲ್ಲ ಕಡೆಯೂ ನೀರು ತುಂಬಿರುವಾಗ ಬಾವಿಕೊಳಗಳಿಂದ ಏನು ಪ್ರಯೋಜನ? ಹಾಗೆಯೇ ಜ್ಞಾನಿಯಾದವನಿಗೆ ಸರ್ವವೇದ ಗಳಿಂದಲೂ ಅಷ್ಟೇ ಪ್ರಯೋಜನ.' ವೇದವು ಅವೇದವಾಗುವ ಸ್ಥಿತಿಯನ್ನು (**ವೇದೋ ಅವೇದೋ ಭವತಿ**) ನಾವು ಮುಟ್ಟಬೇಕು. ಶ್ರೀಕೃಷ್ಣನೂ ಇದೇ ಮಾತನ್ನು ಹೇಳುತ್ತಾನೆ:

**ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।**

''ವೇದಗಳೂ ತ್ರಿಗುಣಾತ್ಮಕವಾದವುಗಳೇ, ನೀನು ಗುಣಗಳನ್ನು ಮೀರಿ ಹೋಗು.''

ಭಗವದ್ಗೀತೆಯು ಈ ಕೆಳಗಿನ ಶ್ಲೋಕದೊಂದಿಗೆ ಮುಕ್ತಾಯ ಗೊಳ್ಳುತ್ತದೆ:

**ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ ।**
**ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ॥**

''ಎಲ್ಲಿ ಯೋಗೇಶ್ವರನಾದ ಕೃಷ್ಣನು ಇರುತ್ತಾನೋ, ಮತ್ತು ಎಲ್ಲಿ ಧನುರ್ಧಾರಿಯಾದ ಅರ್ಜುನನು ಇರುತ್ತಾನೋ ಅಲ್ಲಿ ಶ್ರೀ, ವಿಜಯ, ಐಶ್ವರ್ಯ, ದೃಢನೀತಿ ಇವುಗಳು ನೆಲೆಸಿರುತ್ತವೆ ಎಂಬುದು ನನ್ನ ಅಭಿಪ್ರಾಯ'' ಎಂಬುದಾಗಿ ಸಂಜಯನು ಹೇಳುತ್ತಾನೆ.

ಶ್ರೀ ಎಂದರೆ ಮಂಗಳಕರವಾದುದು – ಪವಿತ್ರತೆ. ವಿಜಯ ಎಂದರೆ ಬಾಹ್ಯ ಹೋರಾಟದಲ್ಲಿ ಪಡೆಯುವ ಜಯವಲ್ಲ, ಆಂತರಿಕ ಕಾಮಕ್ರೋಧಾದಿ ಶತ್ರುಗಳ ಮೇಲೆ ವಿಜಯ. ಭೂತಿ ಎಂದರೆ ಐಶ್ವರ್ಯ ಅಥವಾ ನೈತಿಕ ಮತ್ತು ಆಧ್ಯಾತ್ಮಿಕ ಸಂಪತ್ತು. ಆಧ್ಯಾತ್ಮಿಕ ಹಿನ್ನೆಲೆ ಇದ್ದರೆ ನೀತಿಯು ದೃಢವಾಗಿ ನೆಲೆಯೂರುತ್ತದೆ. ಕೇವಲ ಸಾಮಾಜಿಕ ವ್ಯವಸ್ಥೆಯನ್ನು ಆಧರಿಸಿದ ಅಥವಾ ಭಯದಿಂದ ಪ್ರೇರಿತವಾದ ನೀತಿಯು ದೃಢವಾಗಿ ನೆಲೆಯೂರಲಾರದು. ಅದಕ್ಕೆ ಆಧ್ಯಾತ್ಮಿಕ ತಳಹದಿ ಇದ್ದರೆ ಅದು ದೃಢವೂ ಸ್ವಾಭಾವಿಕವೂ ಆಗು ತ್ತದೆ. ಈ ನಾಲ್ಕು ಮಹತ್ ಸಾಧನಗಳು ಆಧ್ಯಾತ್ಮಿಕ ಜೀವನದ ನಾಲ್ಕು ಸ್ತಂಭಗಳಿದ್ದಂತೆ. ಇವುಗಳಿದ್ದರೆ ಆಧ್ಯಾತ್ಮಿಕ ಜೀವನವು ಸುಸ್ಥಿರವಾಗುತ್ತದೆ. ಈ ಸ್ಥಿತಿಯನ್ನು ಪಡೆಯಲು ನಮಗೆ ಬೇಕಾ ಗಿರುವುದು ಯೋಗೇಶ್ವರ ಕೃಷ್ಣ ಮತ್ತು ಧನುರ್ಧಾರಿ ಅರ್ಜುನ. ಇಲ್ಲಿ ಶ್ರೀಕೃಷ್ಣನು ಪರಮ ಗುರುಸ್ಥಾನದಲ್ಲಿಯೂ ಅರ್ಜುನನು ಯೋಗ್ಯ ಶಿಷ್ಯನ ಸ್ಥಾನದಲ್ಲಿಯೂ ನಿಲ್ಲುತ್ತಾರೆ. (**ಆಶ್ಚರ್ಯೋ ವಕ್ತಾ ಕುಶ ಲೋಽಸ್ಯ ಲಬ್ಧಾ**). ಇಂತಹ ಗುರು-ಶಿಷ್ಯ ಸಂಮಿಲನವಾದಾಗ ಮೇಲಿನ ಸ್ಥಿತಿ ಉಂಟಾಗುತ್ತದೆ. ವ್ಯಕ್ತಿಯು ಅರ್ಜುನನಂತಹ ಶಿಷ್ಯ ನಾದಾಗ ಶ್ರೀಕೃಷ್ಣನಂತಹ ಗುರುವು ದೊರೆಯುತ್ತಾನೆ. ಇದಕ್ಕೆ ವ್ಯಕ್ತಿಯು ತನ್ನ ಅಹಂಕಾರವನ್ನು ತೊರೆದು ಗುರುವಿನಲ್ಲಿ ಶರಣಾ ಗುವುದು ಅತ್ಯಂತ ಆವಶ್ಯಕ. '**ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ**' ಎಂದು ಗುರುವಿನಲ್ಲಿ ಶರಣಾಗಬೇಕು.